# 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| | |
|---|---|
| ಎಸ್ ಸಿ : | **270/2019** |

| | | |
|---|---|---|
| ಸಾಕ್ಷಿದಾರರ ಹೆಸರು | **ಎಮ್ ಎಸ್ ಮೋಹನ್** | |
| ತಂದೆಯ ಹೆಸರು | **ಲೇಟ್ ಸಿದ್ದಯ್ಯ** | ಸಾಕ್ಷಿಗೆ ದಿಃ **06.09.2022** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | **62 ವರ್ಷ** | |
| ಉದ್ಯೋಗ | **ನಿವೃತ ಎ. ಎಸ್ . ಐ** | ಪಿ.ಡಬ್ಲ್ಯೂ **-15** |
| ವಾಸ ಸ್ಥಳ | **ಮೈಸೂರು** | ಸಿ.ಡಬ್ಲ್ಯೂ **-24** |

## ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ನಾನು ನಜರಾಬಾದ್ ಪೊಲೀಸ್ ಠಾಣೆಯಲ್ಲಿ 2016 ರಿಂದ 2020 ರವರೆಗೆ ಕೆಲಸ ಮಾಡಿರುತ್ತೇನೆ. ದಿಃ 25.07.2019 ರಂದು 13 ಗಂಟೆಯಿಂದ 21 ಗಂಟೆಯವರೆಗೆ ನಾನು ಠಾಣಾ ಪ್ರಬಾರದಲ್ಲಿದ್ದಾಗ 14.45 ಗಂಟೆ ಸಮಯಕ್ಕೆ ಠಾಣಾ ಪಿ.ಸಿ ನಂಬರ್ 747 ರವರ ಕೈಯಲ್ಲಿ ದೂರನ್ನು ಠಾಣಾ ಇನ್ಸಪೆಕ್ಟರ್ ಆದ ಮಹದೇವಸ್ವಾಮಿಯವರು ಕಳುಹಿಸಿಕೊಟ್ಟಿದ್ದು ಅದನ್ನು ಸ್ವೀಕರಿಸಿ ಅದರ ಅಧಾರದ ಮೇಲೆ ಠಾಣಾ ಮೊಕದ್ದಮೆ 108/2019 ದಾಖಲಿ ಮಾಡಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮೇಲಾಧಿಕಾರಿಗಳು ಹಾಗೂ ನ್ಯಾಯಾಲಯಕ್ಕೂ ಹಾಗೂ ಪೊಲೀಸ್ ಇನ್ಸಪೆಕ್ಟರ್ ರವರಿಗೆ ಘಟನಾ ಸ್ಥಳಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಫಿರ್ಯಾದಿ ಈಗಾಗಲೇ ನಿ.ಪಿ-1 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-1 (ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿ.ಪಿ-16 ಎಂದು ಗುರುತಿಸಲಾಯಿತು.

**ಪಾಟೀಸವಾಲು :- ಆರೋಪಿತರ ಪರ ವಕೀಲರಿಂದಃ-**

ಪೊಲೀಸ್ ಪೇದೆ ಜೊತೆ ಫಿರ್ಯಾದಿದಾರರು ಠಾಣೆಗೆ ಬಂದಿರಲಿಲ್ಲ. ಪ್ರಥಮ ವರ್ತಮಾನ ವರದಿಯಲ್ಲಿ ದೂರದಾರರ ಸಹಿ ಪಡೆಯಬೇಕು ಎಂದರೆ ಸರಿ ಇದೆ. ಪ್ರಥಮ ವರ್ತಮಾನ ವರದಿಯ ಮೇಲೆ ದೂರುದಾರರ ಸಹಿಯನ್ನು ಇನ್ಸ್ ಪೆಕ್ಟರ್ ರವರು ಪಡೆದುಕೊಂಡು ಅವರೇ ಕಳುಹಿಸಿಕೊಟ್ಟಿರುತ್ತಾರೆ. ಪ್ರಥಮ ವರ್ತಮಾನ ವರದಿಯನ್ನು ಮುಖ್ಯ ಪೇದೆ ಇವರ ಮುಖಾಂತರ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ನಾವು ಪ್ರಥಮ ವರ್ತಮಾನ ವರದಿಗಳ 4 ಕಾಪಿಗಳನ್ನು ರೇಡಿ ಮಾಡಿ ಇನ್ಸ್ ಪೆಕ್ಟರ್ ರವರಿಗೆ ಕಳುಹಿಸಿಕೊಟ್ಟಿರುತ್ತೇನೆ. ನಾನು ಪ್ರಥಮ ವರ್ತಮಾನ ವರದಿ ದಾಖಲಾದ ಅರ್ಧ ಗಂಟೆಯಲ್ಲಿ ಇನ್ಸ್ ಪೆಕ್ಟರ್ ರವರಿಗೆ ಪ್ರಥಮ ವರ್ತಮಾನ ವರದಿಯನ್ನು ಕಳುಹಿಸಿಕೊಟ್ಟಿರುತ್ತೇನೆ. ಪ್ರಥಮ ವರ್ತಮಾನ ವರದಿಯಲ್ಲಿ ನ್ಯಾಯಾಲಯಕ್ಕೆ ಕಳುಹಿಸಿ ದಿನಾಂಕ ಮತ್ತು ಸಮಯ ನಮೂದು ಮಾಡಿದ್ದೇನೆ ಎಂದರೆ ಸರಿ ಇದೆ. ನಾನು ಪ್ರಥಮ ವರ್ತಮಾನ ವರದಿ ನ್ಯಾಯಾಲಯಕ್ಕೆ ಕಳುಹಿಸಿದ ದಿನಾಂಕ ಮತ್ತು ಸಮಯ ಸರಿ ಇರುತ್ತದೆ. ಅದನ್ನು ನಾನೇ ನಮೂದು ಮಾಡಿರುತ್ತೇನೆ. ನಾನು ಯಾವುದೇ ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರಥಮ ವರ್ತಮಾನ ವರದಿಯನ್ನು ಇನ್ಸ್‌ಪೆಕ್ಟರ್ ರವರು ತಯಾರು ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು